ಸಿ.ಸಿ. ನಂ. : 2853/2024

ಸಿ.ಡಬ್ಲ್ಯೂ:5

ಪಿ.ಡಬ್ಲ್ಯೂ: 2

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ನ್ಯಾಯಾಲಯ, ಕಾರವಾರ**

ಸಿ.ಸಿ. ನಂ. : 2853/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಸಾಗರ್ ಅಣ್ಣಪ್ಪ ಗಾಡಿವಡ್ಡರ್ |
| ತಂದೆಯ ಹೆಸರು | : | ಅಣ್ಣಪ್ಪ ಗಾಡಿವಡ್ಡರ್ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಸಿಪಿಸಿ 1901 ಕಾರವಾರ ಗ್ರಾಮೀಣ ಠಾಣೆ |
| ವಾಸ್ತವ್ಯ | : | ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ ದಿಃ **17-02-2026.**

**ಮುಖ್ಯ ವಿಚಾರಣೆಃ ಹಿರಿಯ ಸ ಸ ಅ ರವರಿಂದಃ**

ನಾನು 2021 ರಿಂದ ಇಲ್ಲಿಯವರೆಗೆ ಪೋಲಿಸ್ ಪೇದೆಯಾಗಿ ಕಾರವಾರ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

2. ದಿನಾಂಕ 05-10-2024 ರಂದು ನಾನು ಹಾಗೂ ಚಾಸಾ-4, 6 ರಿಂದ 8 ರವರೊಂದಿಗೆ ಶಿರವಾಡ-ಕಡವಾಡ ಪೆಟ್ರೋಲಿಂಗ್ ಕರ್ತವ್ಯದಲ್ಲಿರುವಾಗ 5-30 ಗಂಟೆಗೆ ಬಾತ್ಮಿದಾರರಿಂದ ಶಿರವಾಡ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಆರೋಪಿತನಾದ ದಯಾನಂದ ಪೆಡ್ನೇಕರ್ ಎಂಬ ವ್ಯಕ್ತಿಯು ಅಕ್ರಮವಾಗಿ ಗೋವಾ ಸಾರಾಯಿಯನ್ನು ತಂದು ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ . ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟನ್ನು ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಚಾಸಾ-13 ರವರಿಗೆ ಕರೆ ಮಾಡಿ ವರದಿಯನ್ನು ಸಲ್ಲಿಸಲು ತಿಳಿಸಿರುತ್ತೇನೆ. 6-15 ಗಂಟೆಗೆ ಚಾಸಾ-13 ರವರು ನನಗೆ ಕರೆ ಮಾಡಿ ಅನುಮತಿ ಪಡೆದ ಬಗ್ಗೆ ತಿಳಿಸಿರುತ್ತಾರೆ. ಅದರಂತೆ 6-30 ಗಂಟೆಗೆ ಚಾಸಾ-2 ಮತ್ತು 3 ರವರು ಶಿರವಾಡ ಗ್ರಾಮದವರಾಗಿದ್ದು ಅವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ದಾಳಿಯ ವಿಷಯವನ್ನು ತಿಳಿಸಿ ಅವರಿಗೆ ನೋಟಿಸು ನೀಡಿ ಅವರು ಪಂಚರಾಗಲು ಒಪ್ಪಿದ ನಂತರ 7-50 ಗಂಟೆಗೆ ನಾವು ಶಿರವಾಡ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಹೋಗಿ ಆರೋಪಿಯ ಮನೆಯ ಹತ್ತಿರ ಹೋಗಿ ಅಲ್ಲಿ ನೋಡಿದಾಗ ಒಬ್ಬ ವ್ಯಕ್ತಿಯು ಕುರ್ಚಿಯ

ಮೇಲೆ ಕುಳಿತಿದ್ದು ಅವನು ನಮ್ಮನ್ನು ನೋಡಿ ಗಾಬರಿಗೊಂಡು, ಅವನಿಗೆ ತನ್ನ ಹೆಸರು ಮತ್ತು ವಿಳಾಸ ಕೇಳಲಾಗಿ ತಾನು ದಯಾನಂದ ನಾಗೇಶ ಪೆಡ್ನೇಕರ್, ವಾಸ ಶಿರವಾಡ ಅಂತಾ ಹೇಳಿದ್ದು ಅವರ ಬಳಿ ಗೋವಾ ಸಾರಾಯಿ ಇದೆಯಾ ಅಂತಾ ಕೇಳಿದಂತೆ ಅವರು ತಡವರಿಸಿದಾಗ ನಮ್ಮ ಸಿಬ್ಬಂದಿಯವರ ಜೊತೆಗೂಡಿ ಅವರ ಸಹಾಯದಿಂದ ಅಕ್ಕಪಕ್ಕದಲ್ಲಿ ಶೋಧನೆ ಮಾಡಿದಾಗ ಅವರು ಕುಳಿತಿದ್ದ ಜಾಗದ ಪಕ್ಕದಲ್ಲಿ ಒಂದು  ತೆಂಗಿನ ಮರ ಇದ್ದು ಅದರ ಕೆಳಗೆ ಒಂದು ಕೈ ಚೀಲ ಸಿಕ್ಕಿದ್ದು ಅದು ಹಳದಿ-ಹಸಿರು ಬಣ್ಣದ್ದು ಆಗಿದ್ದು ಅದರಲ್ಲಿ ಗೋವಾ ಸಾರಾಯಿ ಬಾಟಲಿಗಳಿದ್ದು ಅದರ ಬಗ್ಗೆ ಆರೋಪಿಯ ಬಳಿ ವಿಚಾರಿಸಲಾಗಿ ಅದನ್ನು ತಾನು ಗೋವಾ ರಾಜ್ಯದ ಸಾರಾಯಿ ಇದ್ದು ತಾನು ಕಾರವಾರದಿಂದ ತೆಗೆದುಕೊಂಡು ಬಂದಿರುವ ಬಗ್ಗೆ ತಿಳಿಸಿರುತ್ತಾನೆ. ಇದನ್ನು ತಾನು ದುಪ್ಪಟ್ಟು ಬೆಲೆಗೆ ಮಾರುವ ಉದ್ದೇಶದಿಂದ ತೆಗೆದುಕೊಂಡು ಬಂದಿರುತ್ತೇನೆ ಅಂತಾ ತಿಳಿಸಿರುತ್ತಾನೆ. ಸದ್ರಿ ಕೈಚೀಲದಲ್ಲಿರುವ ಸಾರಾಯಿ ಬಾಟಲಿಗಳನ್ನು ತೆಗೆದು  ಪಂಚರ ಸಮಕ್ಷಮ ಪರೀಲಿಸಿದಾಗ ಅದರಲ್ಲಿ Light Horse Whiskey for sale in Goa only 750 ಎಂ.ಎಲ್ ನ 6 ಬಾಟಲಿಗಳು , Light Horse Whiskey for sale in Goa only 180 ಎಂ.ಎಲ್ ನ 3 ಬಾಟಲಿಗಳು , Goa Special Palm Fenney 750 ಎಂ ಎಲ್ ನ 1 ಬಾಟಲಿ, ಹಾಗೂ Goa Special Palm Fenney 180 ಎಂ ಎಲ್ ನ 2 ಬಾಟಲಿಗಳು ಇದ್ದು ಅವುಗಳನ್ನು ಮಾರಾಟ ಮಾಡಲು ತಮ್ಮ ಬಳಿ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಅದಕ್ಕೆ ಅವರು ಇಲ್ಲ ಅಂತಾ ಹೇಳಿರುತ್ತಾರೆ. ಸದ್ರಿ ಎಲ್ಲಾ ಸಾರಾಯಿ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲು ಬಿಳಿ ಬಟ್ಟೆಯಿಂದ ಸುತ್ತಿ ಅರಗಿನ ಮೊಹರು ಹಾಕಿ ಬಿಳಿ ಚೀಟಿಗಳನ್ನು ಪಂಚರ ಸಹಿ ಪಡೆದು ಅಂಟಿಸಿ ಆ ಸಮಯದಲ್ಲಿ ಚಾಸಾ-9 ರವರು ಪ್ರತ್ಯಕ್ಷದರ್ಶಿಯಾಗಿ ಹಾಜರಿದ್ದರು. ನಾನು ನಿಪಿ-1 ಪಂಚನಾಮೆಗೆ ಸಹಿ ಮಾಡಿರುತ್ತೇನೆ . ಸಾಕ್ಷಿ ನಿಪಿ-1 ರ ಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

3. ಪಂಚನಾಮೆಯ ಸಮಯದಲ್ಲಿ ಚಾಸಾ-1 ರವರ ನಿರ್ದೇಶನದ ಮೇರೆಗೆ ನಾನು ಘಟನಾ ಸ್ಥಳದಲ್ಲಿ ವಿಡಿಯೋ ಚಿತ್ರೀಕರಣ ಹಾಗೂ ಛಾಯಾ ಚಿತ್ರಗಳನ್ನು ನನ್ನ I-phone-14 ರಲ್ಲಿ ತೆಗೆದು ಪೋಲಿಸ್ ಠಾಣೆಯಲ್ಲಿರುವ ಕಂಪ್ಯೂಟರಗೆ ವರ್ಗಾಯಿಸಿ EPSON L-130 ಪ್ರಿಂಟರ್ ನಿಂದ ಕಲರ್ ಪ್ರಿಂಟ್ ತೆಗೆದು ತನಿಖಾಧಿಕಾರಿಗೆ ನೀಡಿರುತ್ತೇನೆ. ನಾನು ಆ ಬಗ್ಗೆ 2 ಕಲಂ 63(4)ಸಿ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸಾಕ್ಷಿ 2 ಪ್ರಮಾಣ ಪತ್ರಗಳನ್ನು

ನೋಡಿ ಅವುಗಳನ್ನು ಗುರುತಿಸಿಕೊಂಡ ಕಾರಣ ಸದ್ರಿ ಪ್ರಮಾಣ ಪತ್ರಗಳನ್ನು ಕ್ರಮವಾಗಿ ನಿಪಿ-6 ಮತ್ತು 7 ಎಂದು ಸಾಕ್ಷಿಯ ಸಹಿಯಗಳನ್ನು ಕ್ರಮವಾಗಿ ನಿಪಿ-6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು . ಸಾಕ್ಷಿ ನ್ಯಾಯಾಲಯದ ಮುಂದಿರುವ ಮುಮಾ-1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. .

**<u>ಪಾಟೀ ಸವಾಲುಃ ಆರೋಪಿತ ಪರಃ ಶ್ರೀ ಜಿ ಪಿ ಟಿ ವಕೀಲರಿಂದಃ</u>**

ನಾನು ಯಾವುದೇ ಸಮಯದಲ್ಲಿ ದಾಳಿಯಲ್ಲಿ ಭಾವಹಿಸಿದ್ದಾಗಲೀ,ಪಂಚನಾಮೆಗೆ ಸಹಿ ಮಾಡಿದ್ದಾಗಲೀ ಹಾಗೂ ನಾನು ಹೇಳುವಂತೆ ವಿಡಿಯೋ ಚಿತ್ರೀಕರಣ ಮಾಡಿ ಛಾಯಾ ಚಿತ್ರಗಳನ್ನು ತೆಗೆದು ಪೋಲಿಸ್ ಠಾಣೆಗೆ ಬಂದು ಕಂಪ್ಯೂಟರಗೆ ವರ್ಗಾಯಿಸಿ ಛಾಯ ಚಿತ್ರ ತೆಗೆದಿದ್ದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಆರೋಪಿಯ ವಶದಿಂದ ಯಾವುದೇ ಮುಮಾಗಳನ್ನು ಜಪ್ತು ಪಡಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ . ಚಾಸಾ-1 ರವರು ನನ್ನ ಮೇಲಾಧಿಕಾರಿಯಾದ ಕಾರಣ ಅವರು ಹೇಳಿದಂತೆ ಪಂಚನಾಮೆಗೆ ಸಹಿ ಮಾಡಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತೆತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕಾರವಾರ**